ಕರ್ನಾಟಕ ವಿಧಾನ ಸಭೆ

ಮಂಗಳವಾರ 30 ನೇ ಜುಲೈ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು.

(ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ವಿಷಯ :- ವಿಜಾಪುರ ಜಿಲ್ಲೆಯ ಮುಳವಾಡ ಏತ ನೀರಾವರಿ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 241 (1718)

ಶ್ರೀ ಬಸನಗೌಡ ರಾ. ಪಾಟೀಲ (ವಿಜಾಪುರ) :- ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಮುಳವಾಡ ಏತ ನೀರಾವರಿ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ;

ಆ) ಈ ಯೋಜನೆಗೆ ಪ್ರಸಕ್ತ ವರ್ಷದಲ್ಲಿ ಎಷ್ಟು ಹಣ ಒದಗಿಸಲಾಗಿದೆ, 1994-95 ಮತ್ತು 1995-96 ನೇ ಸಾಲಿನಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ;

ಇ) ಈ ಯೋಜನೆಯಿಂದ ಎಷ್ಟು ಪ್ರದೇಶಗಳಿಗೆ ನೀರಾವರಿಗೆ ಸದುಪಯೋಗ ವಾಗುವುದು, (ಪ್ರದೇಶವಾರು ವಿವರ ನೀಡುವುದು)

ಈ) ಈ ಯೋಜನೆ ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಇನ್ನೂ ಎಷ್ಟು ಹಣ ಬೇಕಾಗುವುದು?

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :-

ಅ) ವಿಜಾಪುರ ಜಿಲ್ಲೆಯ ಮುಳವಾಡ ಏತ ನೀರಾವರಿ ಯೋಜನೆಗೆ ಜೂನ್ ಅಂತ್ಯದವರೆಗೆ 922.64 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಅ) ಮುಳವಾಡ ಏತ ನೀರಾವರಿ ಯೋಜನೆಗೆ ಪ್ರಸಕ್ತ ವರ್ಷ ಅಂದರೆ 1996-97 ರಲ್ಲಿ 350-00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಮತ್ತು ಸದರೀ ಯೋಜನೆಗೆ 1994-95 ನೇ ಸಾಲಿನಲ್ಲಿ ರೂ. 120-85 ಲಕ್ಷ ರೂಪಾಯಿಗಳನ್ನು ಹಾಗೂ 1995-96 ನೇ ಸಾಲಿನಲ್ಲಿ 309-21 ಲಕ್ಷ ರೂಪಾಯಿಗಳನ್ನು ಕ್ರಮವಾಗಿ ಖರ್ಚು ಮಾಡಲಾಗಿದೆ.

ಆ) ವಿಜಾಪುರ ಜಿಲ್ಲೆಯಲ್ಲಿ ಮುಳವಾಡ ಏತ ನೀರಾವರಿ ಯೋಜನೆಯಿಂದ ನೀರಾವರಿ ಹೊಂದುವ ಒಟ್ಟು ಕ್ಷೇತ್ರವು 30,850 ಹೆಕ್ಟೇರು ಇರುತ್ತದೆ. ಮತ್ತು ತಾಲ್ಲೂಕುವಾರು ನೀರಾವರಿಗೆ ಒಳಪಡುವ ಕ್ಷೇತ್ರವು ಈ ಕೆಳಗಿನಂತಿದೆ.

1) ಬಸವನ ಬಾಗೇವಾಡಿ : 16,659 ಹೆಕ್ಟೇರು
2) ಜಮಖಂಡಿ : 5,861 ಹೆಕ್ಟೇರು
3) ವಿಜಾಪುರ : 8,330 ಹೆಕ್ಟೇರು

ಈ) ಮುಳವಾಡ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರಗಳ ಕೆಲಸಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಘಟ್ಟ-1 ರ ಹಂತ-8 ರಲ್ಲಿ ತೆಗೆದು ಕೊಳ್ಳಲಾಗಿದ್ದು, ಸದರೀ ಕಾಮಗಾರಿಯು ಈಗ ಪ್ರಗತಿಯಲ್ಲಿ ಇದೆ. ಸದರೀ ಯೋಜನೆಯ ಕಾಲುವೆ ಕೆಲಸಗಳನ್ನು ಘಟ್ಟ-2 ರಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ. ಈ ರೀತಿ 2000 ಇಸ್ವಿಯೊಳಗೆ ಸದರೀ ಯೋಜನೆಯನ್ನು ಮುಗಿಸುವ ಕಾರ್ಯಕ್ರಮ ಇರುತ್ತದೆ.

ಸದರೀ ಯೋಜನೆಯನ್ನು ಮುಗಿಸಲು ಇನ್ನೂ 28, 18036 ಲಕ್ಷ ರೂಪಾಯಿಗಳು ಬೇಕಾಗುವುದು.

ಶ್ರೀ ಬಸವನಗೌಡ ರಾ. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಈ ಮುಳವಾಡ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರಗಳ ಕೆಲಸಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ತೆಗೆದುಕೊಳ್ಳಲು ಯೋಜಿಸಲಾಗದೆ ಎಂದು ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಬಿಜಾಪುರ ಜಿಲ್ಲೆಯ ಲಕ್ಷಾಂತರ ಹೆಕ್ಟೇರ್‌ಗಳ ಜಮೀನಿನಲ್ಲಿ ತೆಗೆದುಕೊಂಡಂತಹ ಬಹಳ ಪ್ರಾಮುಖ್ಯವಾದ ನೀರಾವರಿ ಯೋಜನೆ ಇದಾಗಿದೆ. ಈಗಾಗಲೇ ಸನ್ಮಾನ್ಯ ಸಚಿವರು ಈ ಯೋಜನೆಯನ್ನು ಮುಗಿಸಲು ಇನ್ನೂ 28,180.36 ಲಕ್ಷ ರೂಪಾಯಿಗಳು ಬೇಕಾಗುವುದು ಎಂದು ತಿಳಿಸಿದ್ದಾರೆ. ಇವತ್ತಿನ ದಿವಸ ಈ ಕಾರ್ಯ ಆಮೆ ಗತಿಯಿಂದ ನಡೆಯುತ್ತಿದೆ. ಮೊದಲನೆಯ ಘಟ್ಟದ ಕೆಲಸ ಆಗಬೇಕಾಗಿದೆ. ಈ ಘಟ್ಟದ ಕೆಲಸಗಳು ಇನ್ನೂ ಪೂರ್ತಿ ಆಗಿಲ್ಲ ಮತ್ತು ಜಾಗ್ರತೆ ಪೂರ್ತಿ ಮಾಡಲು ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ಈ ಯೋಜನೆಗೆ ಒಟ್ಟು 28,180.86 ಲಕ್ಷದಲ್ಲಿ ಈ ವರ್ಷ ಅಂದರೆ 1995-96 ನೇ ಸಾಲಿಗೆ 309.21 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ತಿಳಿಸಿದ್ದಾರೆ. ಆದರೆ ಕಳೆದ ಸಾಲಿನಲ್ಲಿ ಇಟ್ಟಂತಹ ಹಣ ಸಾಕಷ್ಟು ಖರ್ಚಾಗಿಲ್ಲ. ಸರ್ಕಾರ ದಯಮಾಡಿ ಇದನ್ನು ಗಂಭೀರವಾಗಿ ಪರಿಗಣಿಸಿ ಈ ಕೆಲಸ ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ಬಸನಗೌಡರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆಗೆ 281 ಕೋಟಿ ರೂಪಾಯಿ ಅಂದಾಜು ಮಾಡಿ ಇಲ್ಲಿಯವರೆಗೆ ಕಳೆದ ಎರಡು ವರ್ಷಗಳಿಂದ ನೀವು ಖರ್ಚು ಮಾಡಿರುವುದು ಕೇವಲ 9 ಕೋಟಿ ರೂಪಾಯಿಗಳು ಮಾತ್ರ ಎಂದು ತಿಳಿಸಿದ್ದಾರೆ. ಕೆಲಸ ಮಂದಗತಿಯಿಂದ ಆಗಿದೆ ಏನ್ನುವುದು ಅವರ ಪ್ರಶ್ನೆ ಆಗಿದೆ. ಅದು ಸಹಜ ಇದೆ ಎಂದು ನನಗೆ ಅನಿಸಿದೆ. ಈ ವರ್ಷ 1996-97ಕ್ಕೆ ಮೂರು ಕೋಟಿ 50 ಲಕ್ಷ ರೂಪಾಯಿಗಳನ್ನು ಇಟ್ಟು 30 ಸಾವಿರ ಹೆಕ್ಟೇರ್‌ಗೆ ನೀರಾವರಿ ಆಗತಕ್ಕ ಕೆಲಸ ಆಗುತ್ತದೆ. ಎರಡು ಸಾವಿರ ಇಸವಿಯೊಳಗೆ ಒಂದು ಟೈಮ್‌ಬೌಂಡ್ ಪ್ರೋಗ್ರಾಮ್ ಹಾಕಿ 1997-98, 1998-99, 1999-2000 ವರ್ಷಕ್ಕೆ ಎಷ್ಟು ಬೇಕು ಎಂದು ಅಂದಾಜು ಮಾಡಿ 2081 ಕೋಟಿ ರೂಪಾಯಿಯ ಆಕ್ಷನ್ ಪ್ಲಾನ್ ಮಾಡಿ ಮುಗಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆ.

ಶ್ರೀ ಬಸವನಗೌಡ ರಾ. ಪಾಟೀಲ್ :- 20,81 ಕೋಟಿ ರೂಪಾಯಿಗಳಲ್ಲಿ ಈ ವರ್ಷ ಇಟ್ಟಿರುವುದು ಕೇವಲ ಮೂರೂವರೆ ಕೋಟಿ ರೂಪಾಯಿಗಳು ಮಾತ್ರ. ಈ ರೀತಿ ಇಷ್ಟು ಕಡಿಮೆ ಪ್ರಮಾಣದಲ್ಲಿ ಹಣ ಇಟ್ಟರೆ ನಿಶ್ಚಿತವಾಗಿ ಕೆಲಸ ಆಗುತ್ತದೆಯೇ ಎಂದು ಜನರಲ್ಲಿ ಭೀತಿ ಹುಟ್ಟಿದೆ. ಸರ್ಕಾರದ ಏತ ನೀರಾವರಿ ಯೋಜನೆಯಿಂದ ಮುಳುಗಡೆ ಆಗಿರುವ ಪ್ರದೇಶವಾಗಿದ್ದು ಲಕ್ಷಾಂತರ ಹೆಕ್ಟೇರ್ ಜಮೀನನ್ನೂ ಜನ ಕಳೆದುಕೊಂಡಿರುವುದರಿಂದ ದಯಮಾಡಿ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು ಇದನ್ನು ಮುಗಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಈ ಯೋಜನೆಯಿಂದ ಮೂರು ತಾಲ್ಲೂಕುಗಳಿಗೆ ಅನುಕೂಲ ಆಗುವ ದೃಷ್ಟಿಯಿಂದ ಇದನ್ನು ಮುಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಸಚಿವರಿಗೆ ಗೊತ್ತಿದೆ. ಈ ಯೋಜನೆ ವಿಚಾರವಾಗಿ ದೊಡ್ಡ ಹೋರಾಟ, ಸತ್ಯಾಗ್ರಹ ಎಲ್ಲಾ ನಡೆಯಿತು. ಈ ನೀರಾವರಿ ಯೋಜನೆ ಮಾಡುವುದರಿಂದ ಬಹಳ ದೊಡ್ಡ ಲಾಭ ಇದೆ. ಬಿಜಾಪುರ ಜಿಲ್ಲೆಗೆ ಇದೊಂದೇ ಯೋಜನೆ ಆಗಿದೆ. ಅಗತ್ಯವಾಗಿರುವಂತಹ ಹಣವನ್ನು ಬಿಡುಗಡೆ ಮಾಡಿ ನಿಶ್ಚಿತ ಸಮಯದಲ್ಲಿ ಮುಗಿಸುವುದಕ್ಕೆ ತಾವು ತಕ್ಷಣ ಪ್ಲಾನ್ ಮಾಡುತ್ತೀರೋ?

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಬಸನಗೌಡರು ಕೇಳಿದಂತಹ ಪ್ರಶ್ನೆ ಬಹಳ ಸಹಜವಾಗಿದೆ ಬಹಳ ಕಡಿಮೆ ಹಣ ಇಟ್ಟಿದ್ದೇವೆ. 28,180.36 ಲಕ್ಷದಲ್ಲಿ ಇಟ್ಟಿರುವುದು ಕೇವಲ ಮೂರೂವರೆ ಸಾವಿರ ಕೋಟಿ ರೂಪಾಯಿ ಈ ವರ್ಷ ಫೈನಾನ್ಷಿಯಲ್ ಬಜೆಟ್ ಮುಗಿದು ಹೋಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ ಅದರಲ್ಲಿ ಸ್ವಲ್ಪ ಕೊಡಿ.

ಶ್ರೀ ಕೆ. ಎನ್. ನಾಗೇಗೌಡ :- ಐದು ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು ನಾವು ಬಿಜಾಪುರ ಜಿಲ್ಲೆಯಲ್ಲಿ ಮಾಡಬೇಕು ಎಂದು ಯೋಜಿಸಿದ್ದೇವೆ. ಮುಳವಾಡ, ಆಲಮಟ್ಟಿ, ರಾಮಾಪುರ, ಇಂಡಿ, ಭೀಮಾ ಈ ಐದು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳ ಪ್ರೊಪೋಸಲ್ ಅಪ್ರೂವಲ್ ಆಗಿದೆ. ಒಂದು ಲಕ್ಷ 30 ಸಾವಿರ ಹೆಕ್ಟೇರ್ ಜಮೀನು ಮುಳುಗಡೆ ಆಗಿದೆ. ಆ ಜನರು ಈ ಯೋಜನೆಯ ಫಲ ಸಿಕ್ಕಿಲ್ಲ ಎಂದು ಸಹಜವಾಗಿ ಆಕ್ರೋಶರಾಗಿರುತ್ತಾರೆಂದು ಹೇಳಬಹುದು. ಹಿಂದೆ ಸನ್ಮಾನ್ಯ ದೇವೇಗೌಡರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಈ ಐದು ಲಿಫ್ಟ್ ಇರಿಗೇಷನ್ ಕೈಗೊಳ್ಳುವ ಪ್ರಾಜೆಕ್ಟ್ ರಿಪೋರ್ಟ್‌ಗೆ ಅಪ್ರೂವಲ್ ಕೊಟ್ಟಿದ್ದರು. ಕೇಂದ್ರ ಸರ್ಕಾರದಿಂದ ಬರುವ ಹಣದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಟ್ಟು ಈ ಯೋಜನೆಯನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ ಗಂಭೀರವಾದ ಪ್ರಶ್ನೆ ಉದ್ಭವಿಸಿದೆ. ಮೊದಲ ಹಂತದಲ್ಲಿ ಅಲ್ಲಿ ಜಾಕ್‌ವೆಲ್ ಮಂಜೂರಾಗಿದ್ದು, ಅದಕ್ಕೆ ಅಡಿಪಾಯ ತೋಡುವುದಕ್ಕಾಗಿ ಈಗಾಗಲೇ 4 ಕೋಟಿ 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಆದರೆ, ಆ ಜಾಕ್‌ವೆಲ್ ಅನ್ನು ಈಗ ಬೇರೆಡೆಗೆ ಬದಲಾಯಿಸಿದ್ದಾರೆ. ಈ ರೀತಿ ಬದಲಾಯಿಸಿರುವುದಕ್ಕೆ ಕಾರಣವೇನೆಂದು ಗೊತ್ತಾಗಿಲ್ಲವಾದ್ದರಿಂದ ಇದರ ಬಗ್ಗೆ ಸರ್ಕಾರ ಹೇಳಬೇಕು. ಮೊದಲು ಅಲ್ಲಿ ಜಾಕ್‌ವೆಲ್ ನಿರ್ಮಾಣ ಮಾಡಬೇಕೆಂದು ತಾಂತ್ರಿಕವಾಗಿ ಮಂಜೂರು ಮಾಡಿದವರು ಯಾರು? ಮತ್ತು ತದನಂತರ ಅಲ್ಲಿ ಜಾಕ್‌ವೆಲ್ ನಿರ್ಮಿಸುವುದು ನಿರುಪಯುಕ್ತವೆಂದು ತಿಳಿದ ನಂತರ ಸಂಬಂಧಪಟ್ಟ ತಾಂತ್ರಿಕ ತಜ್ಞರು ಯಾರಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರವೇನಾದರೂ ತೀರ್ಮಾನ ಮಾಡಿದೆಯೇ ಅಥವಾ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಂಡು ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆಯೇ? ಏಕೆಂದರೆ, ಕೃಷ್ಣಾ ಮೇಲ್ದಂಡೆ ಯೋಜನಾ ಕಾಮಗಾರಿಯಲ್ಲಿ ಕೋಟ್ಯಾಂತರ ರೂಪಾಯಿಗಳು ದುರುಪಯೋಗ ವಾಗುತ್ತಿದ್ದು ಇದರ ಬಗ್ಗೆ ಸರ್ಕಾರ ಗಮನಹರಿಸಲೇಬೇಕಾಗಿದೆ.

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಸದಸ್ಯರಿಗೆ ಈ ಕುರಿತು ಹೇಳುವುದಾದರೆ 1994-95 ರಿಂದ ಇಲ್ಲಿಯವರೆಗೆ ಒಟ್ಟು 9 ಕೋಟಿ 22 ಲಕ್ಷ ರೂಪಾಯಿಗಳು ಖರ್ಚಾಗಿದೆ. ಮಾನ್ಯ ಸದಸ್ಯರಾದ ಶ್ರೀ ಜಿ. ವಿ. ಶ್ರೀರಾಮರೆಡ್ಡಿಯವರು ಮುಳವಾಡ ಏತ ನೀರಾವರಿ ಬಗ್ಗೆ ಪ್ರಸ್ತಾಪಿಸಿದ್ದು, ಆ ಯೋಜನೆಯನ್ನು ಇನ್ನೂ ನಾನು ನೋಡಿಲ್ಲ. ಅಲ್ಲಿ ನಿರ್ಮಾಣವಾಗಬೇಕಾಗಿದ್ದ ಜಾಕ್‌ವೆಲ್‌ಅನ್ನು ಬೇರೆಡೆಗೆ ಬದಲಾವಣೆ ಮಾಡಲಾಗಿದೆಯೆಂದು, ಅಲ್ಲದೆ, ಈಗಾಗಲೇ ಅದಕ್ಕೆ 4 ಕೋಟಿ 2 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲಾಗಿದೆಯೆಂದು ನನ್ನ ಗಮನಕ್ಕೆ ತಂದಿದ್ದಾರೆ. ಜಾಕ್‌ವೆಲ್‌ಅನ್ನು ಬೇರೆಡೆಗೆ ಬದಲಾಯಿಸಿರುವುದರ ಬಗ್ಗೆ ಸಧ್ಯಕ್ಕೆ ಆ ಕುರಿತು ಮಾಹಿತಿ ನನ್ನಲ್ಲಿಲ್ಲವಾದ್ದರಿಂದ, ಮಾಹಿತಿ ತರಿಸಿ ವಿವರವಾಗಿ ಅಧ್ಯಯನ ಮಾಡಿ ಪರಿಸ್ಥಿತಿ ಏನೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.